ಬೋಧಕೇತರ ಹುದ್ದೆಗಳಿಗೆ ಸಂಬಂಧಿಸಿದಂತೆ ಮುಂದೆ ಬಡ್ತಿ ನೀಡುವ ಸಂದರ್ಭದಲ್ಲಿ ಹಾಗೂ ನೇರ ನೇಮಕಾತಿ ಮೂಲಕ ಸೂಕ್ತ ಅಭ್ಯರ್ಥಿಗಳ ಪಟ್ಟಿ ಬಂದಾಗ ಕೊರತೆಯಿರುವ ಗ್ರೂಪ್ 'ಸಿ' ಹುದ್ದೆಗಳನ್ನು ತುಂಬಲಾಗುವುದು

(357) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮೈಸೂರು ನಗರದಲ್ಲಿರುವ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ವಿವರ ನೀಡುವುದು,

ಆ) ಈ ಕಾಲೇಜುಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಶಿಕ್ಷಣ ಕ್ರಮವಾರು ವಿಷಯವಾರು ನೀಡುವುದು,

ಇ) ಈ ಕಾಲೇಜುಗಳಲ್ಲಿನ ಹಾಲಿ ಇರುವ ಕೊರಡಿಗಳ ಸಂಖ್ಯೆ ಎಷ್ಟು, ಅಗತ್ಯ ಇರುವ ಕೊರಡಿಗಳೆಷ್ಟು, ಕೊರತೆ ಇರುವ ಕೊರಡಿಗಳ ಸಂಖ್ಯೆ ಎಷ್ಟು,

ಈ) ಕೊರಡಿಗಳ ಕೊರತೆ ನೀಗಿಸಲು ಸರ್ಕಾರ ಯಾವ ಕ್ರಮ ವಹಿಸಿದೆ ವಿವರ ನೀಡುವುದು?

ಶ್ರೀ ಡಿ ಎಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಮೈಸೂರು ನಗರದಲ್ಲಿ ಒಟ್ಟು 4 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿರುತ್ತವೆ

1) ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು
2) ಮಹಾರಾಣಿ ಮಹಿಳಾ ಕಲಾ ಕಾಲೇಜು
3) ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ
4) ಪ್ರಥಮ ದರ್ಜೆ ಮಹಿಳಾ ಕಾಲೇಜು, ವಿಜಯನಗರ

ಆ)

ಕಾಲೇಜಿನ ಹೆಸರು	ವಿದ್ಯಾರ್ಥಿಗಳ ಸಂಖ್ಯೆ		
	ವಿಜ್ಞಾನ	ಕಲಾ	ವಾಣಿಜ್ಯ
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು	1263	–	–
ಮಹಾರಾಣಿ ಮಹಿಳಾ ಕಲಾ ಕಾಲೇಜು	–	2862	–

ಕಾಲೇಜಿನ ಹೆಸರು	ವಿದ್ಯಾರ್ಥಿಗಳ ಸಂಖ್ಯೆ		
	ವಿಜ್ಞಾನ	ಕಲಾ	ವಾಣಿಜ್ಯ
ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ	17	258	103
ಪ್ರಥಮ ದರ್ಜೆ ಮಹಿಳಾ ಕಾಲೇಜು, ವಿಜಯನಗರ	–	50	–

ಇ)

ಕಾಲೇಜಿನ ಹೆಸರು	ಕೊರಡಿಗಳ ಸಂಖ್ಯೆ		
	ಹಾಲಿ ಇರುವ	ಅಗತ್ಯ ಇರುವ	ಕೊರತೆ ಇರುವ
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು	40	20	20
ಮಹಾರಾಣಿ ಮಹಿಳಾ ಕಲಾ ಕಾಲೇಜು	27	57	30
ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ	11	23	12
ಪ್ರಥಮ ದರ್ಜೆ ಮಹಿಳಾ ಕಾಲೇಜು, ವಿಜಯನಗರ	6	–	–

ಈ) ರಾಜ್ಯ ವಲಯ ಯೋಜನೆಯಡಿ 2006–07ನೇ ಸಾಲಿಗೆ ರೂ 9 00 ಕೋಟಿಗಳನ್ನು ಒದಗಿಸಲಾಗಿದೆ

ಅಪೆಂಡಿಕ್ಸ್–ಇ ಅಡಿಯಲ್ಲಿಯೂ 16 31 ಕೋಟಿಗಳ ಅನುದಾನವನ್ನು 2006–07ನೇ ಸಾಲಿಗೆ ಒದಗಿಸಲಾಗಿದೆ

542(866) ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಕೋಲಾರ ಜಿಲ್ಲೆ, ಗೌರಿಬಿದನೂರು ತಾಲ್ಲೂಕಿನಲ್ಲಿ ನೀರಾವರಿಯ ಸೌಕರ್ಯವು ಇಲ್ಲದೇ ರೈತರು ಕಂಗಾಲಾಗಿದ್ದು, ಕುಡಿಯಲು ಸಹ ನೀರು